05.10.2021. ಸಿ.ಸಿ.ನಂಃ1038/2020

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.

ಸಿ ಸಿ ನಂಃ 1038/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ದೇವೇಂದ್ರಪ್ಪ | | ಪಿ.ಡಬ್ಲ್ಯೂ | : 1 |
| ತಂದೆಯ ಹೆಸರು | : ಬಸಪ್ಪ | | ಸಿ.ಡಬ್ಲ್ಯೂ | : 1 |
| ವಯಸ್ಸು | : 55 ವರ್ಷ | | ದಿನಾಂಕ | : 05.10.2021 |
| ಉದ್ಯೋಗ | : ವ್ಯವಸಾಯ | | | |
| ವಾಸಸ್ಥಳ | : ಬಿದರಕೆರೆ ಗ್ರಾಮ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನ್ಯಾಯಾಲಯದ ಮುಂದೆ ಈ ದಿನ ಹಾಜರಿರುವ ಆರೋಪಿತರು ಯಾರು ಎಂಬುದು ನನಗೆ ಗೊತ್ತು. ಅದೇ ರೀತಿ ನ್ಯಾಯಾಲಯದ ಮುಂದೆ ಗೈರು ಹಾಜರಿರುವ 2,3 ಮತ್ತು 6 ನೇ ಆರೋಪಿತರು ಸಹಾ ನನಗೆ ಗೊತ್ತು. ಚಾಸಾ–2 ರಿಂದ 5 ಸಹಾ ನನಗೆ ಗೊತ್ತು. ಚಾಸಾ–2 ನನ್ನ ಹೆಂಡತಿ. ಚಾಸಾ–3 ನನ್ನ ತಮ್ಮನ ಹೆಂಡತಿ. ಚಾಸಾ–3 ರವರು ಚಾಸಾ–2 ರವರ ತಾಯಿ. ಚಾಸಾ–5 ನನ್ನ ತಮ್ಮ.

ದಿಃ05.08.2012 ರಲ್ಲಿ ರಾತ್ರಿ 08.15 ರ ಸಮಯದಲ್ಲಿ ಆರೋಪಿತರು ನಮ್ಮ ಮನೆಯ ಮುಂದೆ ನಲ್ಲಿಯನ್ನು ಕಿತ್ತು ಹಾಕಿದ್ದರು. ಅವರ ನಡುವೆ ಆಸ್ತಿಯ ವಿಚಾರದಲ್ಲಿ ನಮಗೆ ಗಲಾಟೆ ಇದ್ದುದ್ದರಿಂದ ಆರೋಪಿತರು ಆ ದ್ವೇಷದಿಂದ ನಮ್ಮ ಮೇಲೆ ಗಲಾಟೆ ಮಾಡಿರುತ್ತಾರೆ. 1 ನೇ ಆರೋಪಿ ನನ್ನ ಬಟ್ಟೆಯನ್ನು ಕಿತ್ತು ಹಾಕಿರುತ್ತಾರೆ. 1 ನೇ ಆರೋಪಿಯು ಕುಡುಗೋಲಿನಿಂದ ನನ್ನ ತಲೆಗೆ ಹೊಡೆದಿರುತ್ತಾನೆ. ಚಾಸಾ–4 ಬಿಡಿಸಲು ಬಂದಾಗ ಅವರಿಗೂ ಸಹಾ ಅವರ ಬೆನ್ನಿಗೆ ಹೊಡೆದಿರುತ್ತಾರೆ. ನನಗೆ ಪ್ರಜ್ಞೆ ಹೋಗಿರುತ್ತದೆ ಚಾಸಾ–2 ರಿಂದ 4 ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುತ್ತಾರೆ. ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಇರುವುದಿಲ್ಲ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ಪೋಲೀಸರು ಬಂದು ದೂರು ಬರೆದುಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು

ದಿ:06.08.2012 ರ ಹೇಳಿಕೆ ದೂರಾಗಿದ್ದು ಸದರಿ ದಾಖಲೆಯನ್ನು ನಿಪಿ:1 ಎಂದು ಸಾಕ್ಷಿಯ ಸಹಿಯನ್ನು ನಿಪಿ:1(ಎ) ಎಂದು ಗುರುತಿಸಲಾಯಿತು. **ನಿಪಿ–1** ರ ದೂರನ್ನು ನಾನು **ದಿ:06.08.2012** ರ ಬೆಳಿಗ್ಗೆ **07.00** ಗಂಟೆಗೆ ನೀಡಿರುತ್ತೇನೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ನಿಪಿ–1 ಕ್ಕೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ಆರೋಪಿತರು ಗಲಾಟೆಯಲ್ಲಿ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ನಾನು ನಿಪಿ–1 ರ ದೂರಿನಲ್ಲಿ 2 ನೇ ಆರೋಪಿಯು ಚಾಸಾ–3 ರ ಮಾಂಗಲ್ಯ ಸರವನ್ನು ಹಿಡಿದು ಎಳೆದಾಡಿದಾಗ ಅದು ಎಲ್ಲೋ ಬಿದ್ದು ಹೋಗಿರುತ್ತದೆ ಎಂದು ತಿಳಿಸಿದ್ದೇನೆ ಎಂದರೆ ಸರಿ. ನಿಪಿ–1 ರ ಹೇಳಿಕೆ ದೂರನ್ನು ರಾತ್ರಿ 02.30 ರಸಮಯದಲ್ಲಿ ನೀಡಿರುತ್ತೇನೆ ಎಂದರೆ ಸರಿ.

## ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ.ಆರ್.ಎಸ್ ವಕೀಲರಿಂದ :

1 ನೇ ಆರೋಪಿ ನನ್ನ ತಮ್ಮ ಎಂದರೆ ಸರಿ. 2 ನೇ ಆರೋಪಿ ನನ್ನ ತಂಗಿ ಎಂದರೆ ಸರಿ. ಚಾಸಾ–05 ನನ್ನ ತಮ್ಮ ಎಂದರೆ ಸರಿ. ನನ್ನ ತಂಗಿಯಾದ 2 ನೇ ಆರೋಪಿ ನಮ್ಮ ಊರಿನಲ್ಲಿ ಒಬ್ಬ ಹುಡುಗನನ್ನು ಪ್ರೀತಿಸಿ ಮದುವೆಯಾಗಿರುತ್ತಾಳೆ ಎಂದರೆ ಸರಿ.

1 ಮತ್ತು 3 ನೇ ಆರೋಪಿತರು ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಾರೆ ಎಂದೆರ ಸರಿ. ನಾನು ಮತ್ತು ಚಾಸಾ–5 ತುಂಬಾ ವಿಶ್ವಾಸದಿಂದ ಇದ್ದೆವೆ ಎಂದರೆ ಸರಿ. ನನಗೂ, 1 ಮತ್ತು 2 ನೇ ಆರೋಪಿತ ನಡುವೆ ಅಷ್ಟಾಗಿ ವಿಶ್ವಾಸ ಇಲ್ಲ ಎಂದರೆ ಸರಿ.

4 ರಿಂದ 6 ನೇ ಆರೋಪಿತರು ನಮ್ಮ ಕುಟುಂಬಸ್ಥರಲ್ಲ ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ತಮ್ಮ ನಡುವೆ ತುಂಬಾ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿ. 2 ನೇ ಆರೋಪಿತೆ ಪಾಲವಿಭಾಗ ಕೋರಿ ನನ್ನ ವಿರುದ್ಧ ಒಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಸಿವಿಲ್ ದಾವೆ ಚಾಲ್ತಿಯಲ್ಲಿ ಇದ್ದಾಗ ಚಾಸಾ–5 ಮತ್ತು ನನ್ನ ಮಕ್ಕಳು 1 ಮತ್ತು 2 ನೇ

ಆರೋಪಿತರ ಜಮೀನಿಗೆ ಹೋಗಿ ಕಾಯಿ ಕೀಳಲು ಹೋಗಿದ್ದರು ಮತ್ತು ಆ ಸಮಯದಲ್ಲಿ ಗಲಾಟೆ ಆಗಿತ್ತು ಎಂದರೆ ಸರಿ. ಆಗ ಚಾಸಾ–5 ರ ವಿರುದ್ಧ 2 ನೇ ಆರೋಪಿಯು ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಕೇಸಿನ ನಂಬರ್ ಸಿಸಿ.1017/2020 ಆಗಿದೆ ಎಂದರೆ ಸರಿಯಲ್ಲ.

ನಾನು ಸಂಬಂಧಪಟ್ಟ ಪಂಚಾಯಿತಿಯಿಂದ ನಲ್ಲಿಗೆ ಲೈಸೆನ್ಸ್ ಪಡೆದಿರುತ್ತೇನೆ. ನಾನು ಯಾವ ದಿನಾಂಕದಂದು ಲೈಸನ್ಸ್ ಪಡೆದಿರುತ್ತೇನೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಲೈಸೆನ್ಸ್ ಅನ್ನು ನಾನು ತನಿಖಾಧಿಕಾರಿಗಳಿಗೆ ನೀಡಿಲ್ಲ. ಆರೋಪಿತರು ನಲ್ಲಿ ಕಿತ್ತು ಹಾಕಿದ್ದಾರೆ ಎಂದು ಸಂಬಂಧಪಟ್ಟ ಪಂಚಾಯಿತಿಗೆ ನಾನು ದೂರು ಸಲ್ಲಿಸಿಲ್ಲ.

ದಿ:05.08.2012 ರಂದು ರಾತ್ರಿ 08.45 ರ ಸಮಯದಲ್ಲಿ ನಾನು ಆರೋಪಿತರಿಗೆ ಹೊಡೆದಿರುತ್ತೇನೆ ಎಂದು ಅವರು ಸಹಾ ನನ್ನ ವಿರುದ್ಧ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ, ಚಾಸಾ–2 ರಿಂದ 5 ರ ವಿರುದ್ಧ ಆರೋಪಿತರು ದೂರು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದ ನಂಬರ್ ಸಿಸಿ ನಂ.1026/2020 ಆಗಿದೆ ಎಂದರೆ ಸರಿ.

ಗಲಾಟೆ ಆಯಿತು ಎಂದು ಹೇಳಲಾದ ದಿನ ಎಷ್ಟು ಜನ ಸೇರಿದ್ದರು ಎಂಬುದನ್ನು ನನಗೆ ಹೇಳಲು ಆಗುವುದಿಲ್ಲ. ಗಲಾಟೆ ಆಯಿತು ಎಂದು ಹೇಳಲಾದ ದಿನ ಕತ್ತಲು ಆಗಿತ್ತು ಎಂದರೆ ಸರಿ. ಯಾವ ಯಾವ ಆರೋಪಿತರು ಯಾವ ಯಾವ ದಿಕ್ಕಿನಿಂದ ಬಂದಿರುತ್ತಾರೆ ಎಂಬುದುನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಅದೇ ರೀತಿ ಯಾವ ಯಾವ ಆರೋಪಿತರು ಏನೇನು ಬೈದಿರುತ್ತಾರೆ ಎಂಬುದನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಗಲಾಟೆಯಲ್ಲಿ ಹರಿದಿದ್ದ ಷರ್ಟ್ ಅನ್ನು ನಾನು ಪೊಲೀಸರಿಗೆ ನೀಡಿಲ್ಲ. ನಾನು ಆಸ್ಪತ್ರೆಗೆ ಯಾವ ವಾಹನದಲ್ಲಿ ಬಂದಿರುತ್ತೇನೆ ಎಂಬುದು ನನಗೆ ಗೊತ್ತಿಲ್ಲ. ನನ್ನ ತಲೆಗೆ ಪೆಟ್ಟು ಬಿದ್ದಾಗ ರಕ್ತ ಬಂದಿದ್ದು ಆ ರಕ್ತದ ಕಲೆಗಳು ನನ್ನ ಷರ್ಟ್ ಗೆ ಆಗಿರುತ್ತದೆ. ನಿಪಿ–1 ರಲ್ಲಿ ಏನು ಬರೆದಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ–1 ನ್ನು ಚಾಸಾ–2 ಮತ್ತು 3 ಹೇಳಿ ಬರೆಸಿರುತ್ತಾರೆ. ನಿಪಿ–1 ರಲ್ಲಿ ಕುಡುಗೋಲಿನಿಂದ

ಹೊಡೆಯಲಾಗಿದೆ ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಕೊಡಲಿ ಇಂದ ಹೊಡೆಯಲಾಗಿದೆ ಎಂಬ ಉಲ್ಲೇಖ ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.